# ಮಾಧ್ಯಮ ಮಂಗಳ

ಸಂಪುಟ: 14 ಸಂಚಿಕೆ: 1

ದಿನಾಂಕ: 01-02-2018

ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

## ಸ್ವಾಮಿ ವಿವೇಕಾನಂದರು ಸ್ವಾಭಿಮಾನದ ಚಿಹ್ನೆ: ಪ್ರೊ. ವಿಜಯ್



ಪ್ರೊ. ವಿಜಯ್ ತಂಬಂಡ ಪೂಣಚ್ಚ ಅವರು ಸ್ವಾಮಿ ವಿವೇಕಾನಂದರ 155ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

**ಮಂಗಳಗಂಗೋತ್ರಿ:** ಸ್ವಾಮಿ ವಿವೇಕಾನಂದರು ದೇಶದುದ್ದಕ್ಕೂ ಸಂಚರಿಸಿದವರು. ಅವರು ಸ್ವಾಭಿಮಾನದ ಚಿಹ್ನೆ ಭಾರತ ಹಿಂದೆಂದೂ ಕಾಣದ ಪರಮಯೋಗಿ ವಿವೇಕಾನಂದರು, ಇವರು 125 ವರ್ಷಗಳ ಹಿಂದೆ ಹೇಳಿದ ಸಾಮಾಜಿ-ಕ ಪಿಡುಗುಗಳು ಈಗಲೂ ಇದೆ. ಮುಂದೊಂದು ದಿನ ಶೂದ್ರ ರಾಜ್ಯ ಬರುತ್ತದೆ. ಸಮಾಜದಲ್ಲಿ ಒಳ್ಳೆಯ ಸ್ಥಾನ ಗಿಟ್ಟಿಸಬೇಕಾದರೆ ನಮ್ಮ ತಪ್ಪುಗಳನ್ನು ನಾವೇ ತಿದ್ದಿಕೊಳ್ಳಬೇಕು. ಹಾಗೆಯೇ ನಾವು ಬೌದ್ಧಿಕವಾಗಿ, ಶಾರೀರಿಕವಾಗಿ ಬೆಳೆಯಬೇಕು ಎಂದು ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಇತಿಹಾಸ ಪ್ರಾಧ್ಯಾಪಕರಾದ ಡಾ. ವಿಜಯ್ ತಂಬಂಡ ಪೂಣಚ್ಚ ಅವರು ನುಡಿದರು.

ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಆಶ್ರಯದಲ್ಲಿ ನಡೆದ ಸ್ವಾಮಿ ವಿವೇಕಾನಂದರ 155ನೇಯ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾವೆಲ್ಲರೂ ಅಣ್ಣ, ತಮ್ಮ, ಅಕ್ಕ, ತಂಗಿಯಂತೆ ಬದುಕಬೇಕು. ಸಾಮಾಜಿಕ ಸ್ವಾಭಿಮಾನ ಇಲ್ಲದ ಸ್ವಾತಂತ್ರ್ಯ ಸ್ವಾತಂತ್ರ್ಯವೇ ಅಲ್ಲ ಎಂದರು. ಮಾನಸಿಕ, ದೈಹಿಕ ಗುಲಾಮಗಿರಿಯಿಂದ ಹೊರಗೆ ಬಂದು ಸದೃಢವಾಗಿ ಬೆಳೆಯಬೇಕು ಅಷ್ಟೇ ಅಲ್ಲದೆ ವಿವೇಕಾನಂದರ ಜಯಂತಿ ದಿನ ದೀಪ ಬೆಳಗಿಸಿದರೆ ಸಾಲದು. ಒಂದು ದಿನಕ್ಕಾಗಿ ಅವರ ಜನ್ಮದಿನ, ಧ್ಯೇಯಗಳಲ್ಲ. ಬದಲಾಗಿ ನಮ್ಮ ಜೀವನದುದ್ದಕ್ಕೂ ಅವುಗಳನ್ನು ಅಳವಡಿಸಿಕೊಳ್ಳಬೇಕು. ಒಂದು ದಿನದ ಆಚರಣೆ ಶೋಕಿಗಾಗಿ ಆಚರಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ವಿವೇಕಾನಂದರು ಸ್ತ್ರೀಯರ ಪರವಾಗಿ ನಿಂತವರು. ಹಾಗೆಯೇ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಕೊಡಿ; ವಿಧವೆಯರನ್ನು ದೂರ ಮಾಡಬೇಡಿ ಎಂದವರು. ನಾವು ವಿವೇಕಾನಂದರ ಕೆಲವೊಂದು ಧೋರಣೆಗಳನ್ನು ಮಾತ್ರ ಪಾಲಿಸಿದರೆ ಅದು ತಪ್ಪಾಗುತ್ತದೆ. ಯಾವ ವಿಷಯಗಳ ಬಗ್ಗೆ ನಾವು ಆಲೋಚನೆ ಮಾಡಿ, ಸಮಾಜ ಮುಖಿ ಕೆಲಸ ಮಾಡಬೇಕೋ ಅದು ಈಗ ನಡೆಯುತ್ತಿಲ್ಲ. ಎಲ್ಲಾ ವಿವೇಕಾನಂದರ ಕನಸುಗಳು ನನಸಾಗುವುದು ಕಾಣುತ್ತಿಲ್ಲ. ಇಂದಿನಿಂದ ಬದಲಾವಣೆಯತ್ತ ನಡೆಯೋಣ ಎಂದು ಪ್ರೊ. ವಿಜಯ್ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಎಂ. ಖಾನ್ ಅವರು ಮಾತನಾಡಿ, ನಾವು ಜೀವನದಲ್ಲಿ ಪರಸ್ಪರರೊಂದಿಗೆ ಹೇಗಿರಬೇಕು ಎಂದು ಹೇಳುತ್ತಾ, ವಿವೇಕಾನಂದರು ಧರ್ಮಪಾಲನೆಗೆ ಒತ್ತು ಕೊಟ್ಟವರು ಎಂದರು. ಹಾಗೆಯೇ ಜೀವನದಲ್ಲಿ ನಮಗೆ ಆತ್ಮವಿಶ್ವಾಸ ಬಹಳ ಮುಖ್ಯ, ಸ್ವಾಮಿ ವಿವೇಕಾನಂದರ ಪ್ರತಿಯೊಂದು ಮಾತು ನಮಗೆ ಮಾದರಿಯಾಗಬೇಕು ಎಂದರು.

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಉದಯ ಬಾರ್ಕೂರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಸಿನಿಮಾಕ್ಕೆ ಕಥೆ ಮಾತ್ರ ಮುಖ್ಯವಲ್ಲ: ಜಾರ್ಜ್



ಸಿನಿಮಾದ ಕುರಿತು ವಿ.ಯು.ಜಾರ್ಜ್ ಅವರು ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡುತ್ತಿರುವುದು.

**ಮಂಗಳಗಂಗೋತ್ರಿ:** ಸಿನಿಮಾ ಮಾಡುವಾಗ ಸಿನಿಮಾದಲ್ಲಿ ಯಾವುದು ಸಿಹಿಫಲ ನೀಡುತ್ತವೆ, ಯಾವುದು ಕಹಿಫಲ ನೀಡುತ್ತದೆ ಎಂದು ಊಹಿಸಲು ಅಸಾಧ್ಯ. ಒಂದು ಸಿನಿಮಾ ಚೆನ್ನಾಗಿ ಮೂಡಿಬೇಕಾದರೆ, ಅದರ ಕಥೆ ಮುಖ್ಯವಲ್ಲ ಬದಲಿಗೆ ಆಕಥೆಯನ್ನು ಹೇಗೆ ಬಿಂಬಿಸಿದ್ದೇವೆ ಎನ್ನುವುದು ಪ್ರಮುಖ ಪಾತ್ರ ವಹಿಸುತ್ತದೆ, ಎಂದು ಮಂಗಳೂರು ಟುಡೇ ಸಂಪಾದಕರು ಹಾಗೂ ಚಲನಚಿತ್ರ ನಿರ್ದೇಶಕ ವಿ. ಯು. ಜಾರ್ಜ್ ಅಭಿಪ್ರಾಯಪಟ್ಟಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾದ ಮೂರು ದಿನಗಳ ಚಲನಚಿತ್ರೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಪ್ರೊ. ಜಿ. ಪಿ. ಶಿವರಾಂ ಮಾತನಾಡಿ, ಸಿನಿಮಾ ಸಂಸ್ಕೃತಿಯನ್ನು ಬೆಳೆಸುವತ್ತ ನಾವು ಯುವಜನರನ್ನು ಪ್ರೇರೇಪಿಸಬೇಕು. ಈಗಿನ ಡಿಜಿಟಲ್ ಯುಗದಲ್ಲಿ ಎಲ್ಲರಿಗೂ ಅವರದ್ದೇ ಆದ ಕಲ್ಪನಾ ವಸ್ತುಗಳು ಇರುತ್ತದೆ. ಅದನ್ನು ಪೂರ್ಣಗೊಳಿಸಲು ಸೃಜನಶೀಲತೆ ಹಾಗೂ ಯೋಚನಾ ಶಕ್ತಿಯ ಅಗತ್ಯವಿದೆ ಎಂದರು.

ಚಲನಚಿತ್ರೋತ್ಸವದ ಮೊದಲ ದಿನ ಡಿ.ಸತ್ಯಪ್ರಕಾಶ್ ನಿರ್ದೇಶನದ ಕನ್ನಡ ಸಿನಿಮಾ "ರಾಮ ರಾಮ ರೇ", ಎರಡನೆಯ ದಿನ ನಿರ್ದೇಶಕ ಮಜಿದ್ ಮಜಿದಿ (ಇರಾನ್) ಅವರ "ಬೇರ್ ಫೂಟ್ ಟು ಹೇರತ್" ಎಂಬ ಪರ್ಶಿಯನ್ ಚಲನಚಿತ್ರ ಹಾಗೂ ಮೂರನೆಯ ದಿನ ದಿಲೀಶ್ ಪೋತನ್ ಅವರು ನಿರ್ದೇಸಿದ ಮಲಯಾಳಂ ಚಿತ್ರ "ತೊಂಡಿಮುದಲುಂ ದ್ರಿಕ್ಷಾಕ್ಷಿಯಂ" ಸಿನಿಮಾವನ್ನು ಪ್ರದರ್ಶಿಸಲಾಯಿತು. ಈ ಚಲನಚಿತ್ರೋತ್ಸವಕ್ಕೆ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಶಿಕ್ಷಕರು, ಇತರ ಸಿಬ್ಬಂಧಿ ವರ್ಗದವರು ಸಾಕ್ಷಿಯಾಗಿದ್ದರು.

## ರಕ್ತದಾನದಿಂದ ಹಲವು ರೋಗಗಳ ನಿವಾರಣೆ: ಡಾ. ಶರತ್‌ಕುಮಾರ್




ವೆನ್‌ಲಾಕ್ ಆಸ್ಪತ್ರೆಯ ಬ್ಲಡ್ ಬ್ಯಾಂಕ್ ಅಧಿಕಾರಿ ಡಾ. ಶರತ್ ಕುಮಾರ್ ರಾವ್ ಜೆ. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿರುವುದು.

**ಮಂಗಳಗಂಗೋತ್ರಿ:** ಎಂಟುನೂರು ವರ್ಷಗಳ ಹಿಂದೆ ರಕ್ತದಾನ ಮಾಡುವುದು ಬಹಳ ಕಷ್ಟಕರವಾದ ಸಂಗತಿಯಾಗಿತ್ತು. ಈಗ ಹೊಸ ಹೊಸ ತಂತ್ರಜ್ಞಾನಗಳಿಂದ ರಕ್ತದಾನವು ಸುಲಭವಾಗಿದೆ. ಹಿಂದಿನ ಕಾಲದಲ್ಲಿ ರಕ್ತದ ಸಂಸ್ಕರಣೆ ಮಾಡಲಾಗುತ್ತಿರಲಿಲ್ಲ, ಆದರೆ ಈಗ ಎಲ್ಲಾ ತಪಾಸಣೆಯ ನಂತರವೇ ಒಬ್ಬ ವ್ಯಕ್ತಿಯು ರಕ್ತದಾನ ಮಾಡಲು ಯೋಗ್ಯ ಎಂದು ನಿರ್ಧರಿಸಲಾಗುತ್ತದೆ. ಅಷ್ಟೇ ಅಲ್ಲದೇ ರಕ್ತದಾನದಿಂದ ಹಲವು ರೋಗಗಳ ನಿವಾರಣೆ ಸಾಧ್ಯ ಎಂದು ವೆನ್‌ಲಾಕ್ ಆಸ್ಪತ್ರೆಯ ಬ್ಲಡ್ ಬ್ಯಾಂಕ್ ಅಧಿಕಾರಿ ಡಾ. ಶರತ್ ಕುಮಾರ್ ರಾವ್ ಜೆ. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವೆನ್‌ಲಾಕ್ ಆಸ್ಪತ್ರೆ ಮತ್ತು ರೆಡ್‌ಕ್ರಾಸ್, ಮಂಗಳೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಪರಿಷತ್ತು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ರಕ್ತದಾನಿಗಳ ಕೂಟ, ಸಂವಹನ ಕ್ಲಬ್‌ನ ಜಂಟಿ ಆಶ್ರಯದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಆರನೇ ವರ್ಷದ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಕೆ. ಭೈರಪ್ಪ ಮಾತನಾಡಿ, ಮಂಗಳೂರು ವಿವಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪತ್ರಿಕೋದ್ಯಮ ವಿಭಾಗದವರು ನಡೆಸುವ ರಕ್ತದಾನ ಶಿಬಿರವು ಒಂದು ಅತ್ಯುತ್ತಮ ಕಾರ್ಯಕ್ರಮವಾಗಿದೆ. ಇಂತಹ ಸಾಮಾಜಿಕ ಕಳಕಳಿ ಹೊಂದಿದ ಕಾರ್ಯಕ್ರಮವು ವಿವಿಯಲ್ಲಿ ಇನ್ನಷ್ಟು ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಶಿಬಿರ ಸಂಯೋಜಕರಾದ ಪ್ರೊ. ಜಿ. ಪಿ. ಶಿವರಾಂ, ವಿಭಾಗದ ಮುಖ್ಯಸ್ಥರಾದ ಪ್ರೊ. ವಹೀದಾ ಸುಲ್ತಾನ, ವೆನ್‌ಲಾಕ್ ಆಸ್ಪತ್ರೆಯ ತಾಂತ್ರಿಕ ಸಿಬ್ಬಂದಿ ಎಡ್ವರ್ಡ್, ಆಂಟೋನಿ ಡಿಸೋಜಾ ಭಾಗವಹಿಸಿದ್ದರು.

## ಸಂಪಾದಕೀಯ

### ನಿಲ್ಲದ ಮಳೆ: ಸುಗ್ರೀವಾಜ್ಞೆಯಿಂದ ಕೊಡೆ ಹಿಡಿಯುವ ಪ್ರಯತ್ನ

#### ಅಪ್ರಾಪ್ತ ಮಕ್ಕಳ ಮೇಲಿನ ಅತ್ಯಾಚಾರ ತಡೆಗಟ್ಟಲು ಸುಗ್ರೀವಾಜ್ಞೆ

"ಜಮ್ಮು ಮತ್ತು ಕಾಶ್ಮೀರದ ಕಥುವಾ ಎಂಬ ಪಟ್ಟಣದಲ್ಲಿ ಎಂಟು ವರ್ಷದ ಆಸಿಫಾ ಎಂಬ ಬಾಲಕಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಭೀಕರ ಕೊಲೆಯ ಪ್ರಕರಣವು ದೇಶಾದ್ಯಂತ ವ್ಯಾಪಕವಾದ ಆಕ್ರೋಶ ಮತ್ತು ಪ್ರತಿಭಟನೆ ನಡೆಯುತ್ತಿದ್ದು, ಇನ್ನೂ ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಹೋಗುತ್ತಿರುವ ಬೆನ್ನಲ್ಲೇ, ಕೇವಲ ಭಾರತ ದೇಶದಲ್ಲಿ ಮಾತ್ರ ಅಲ್ಲದೇ, ಅಂತರಾಷ್ಟ್ರೀಯ ಮಟ್ಟದ ನಾಯಕರು ಮತ್ತು ವಿಶ್ವಸಂಸ್ಥೆಯು ಸಹ ಭಾರತಕ್ಕೆ ಛೀಮಾರಿಯನ್ನು ಹಾಕುತ್ತಿದೆ. ಆಗ ನಮ್ಮ ಕೇಂದ್ರ ಸರ್ಕಾರ ತೆಗೆದು ಕೊಂಡ ಕಠಿಣ ಕ್ರಮ ಎಂದರೆ ಸುಗ್ರೀವಾಜ್ಞೆ. ಇದರನ್ವಯ ಹನ್ನೆರಡು ವರ್ಷದ ಕೆಳಗಿನ ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣ ತಡೆಗಟ್ಟಲು ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆಯನ್ನು ವಿಧಿಸಬೇಕು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಹನ್ನೆರಡು ವರ್ಷದ ಮಕ್ಕಳು ಬಾಲಕಿಯರು, ಹದಿಮೂರು ವರ್ಷದ ಮಕ್ಕಳು ಬಾಲಕಿಯರು ಅಲ್ಲವೇ? ಎಂಬ ಪ್ರಶ್ನೆ ಮೂಡಿಬರುತ್ತದೆ. ಹದಿಮೂರು ವರ್ಷದ ಬಾಲಕಿಯ ಮೇಲೆ ಅತ್ಯಾಚಾರವಾದಾಗ ನಮ್ಮ ಕೇಂದ್ರ ಸರ್ಕಾರ ಅವರಿಗೆ ಯಾವ ಶಿಕ್ಷೆ ಕೊಡುತ್ತದೆ, ಎನ್ನುವುದೇ ಪ್ರಶ್ನೆಯಾಗಿದೆ.

ಹದಿನೆಂಟು ವರ್ಷ ತುಂಬದ ಬಾಲಕಿಯನ್ನು ಮದುವೆಯಾದರೆ ಅದು ಅಪರಾಧವಾಗುತ್ತದೆ, ಹಾಗೆ ಅವಳ ಜೊತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದರೆ ಅದು ಸಹ ಅತ್ಯಾಚಾರ ಎಂದು ಪರಿಗಣಿಸಿ ಸರ್ಕಾರವು ಅವರಿಗೆ ಶಿಕ್ಷೆಯನ್ನು ಸಮಾನವಾಗಿ ಕೊಡುವಾಗ, ಈ ಸುಗ್ರೀವಾಜ್ಞೆಯಲ್ಲಿ ಬರಿ ಹನ್ನೆರಡು ವರ್ಷದ ಕೆಳಗಿನ ಬಾಲಕಿಯರ ಮೇಲೆ ಅತ್ಯಾಚಾರ ಮಾಡಿದವರಿಗೆ ಮಾತ್ರ ಗಲ್ಲು ಶಿಕ್ಷೆಗೆ ಒಳಪಡಿಸುವುದಾಗಿ ತಿಳಿಸಲಾಗಿದೆ. ಈ ಕಾನೂನನ್ನು ಹೊರಡಿಸಿದ ನಂತರ ಇತ್ತೀಚೆಗೆ ಹರ್ಯಾಣದ ಯಮುನಾ ನಗರದ ದೇವಾಲಯದ ಸಮೀಪ ಹದಿಮೂರು ವರ್ಷದ ಬಾಲಕಿಯ ಮೇಲೆ ನಾಲ್ವರು ಸಾಮೂಹಿಕ ಅತ್ಯಾಚಾರ ಮಾಡಿದ ಘಟನೆ ಬೆಳಕಿಗೆ ಬಂದಿತು. ಹೀಗಿರುವಾಗ, ಹನ್ನೆರಡು ವರ್ಷದ ಒಳಗಿನ ಮಕ್ಕಳ ಮೇಳಿನ ಅತ್ಯಾಚಾರಕ್ಕೆ ಗಲ್ಲು ಶಿಕ್ಷೆ, ಹದಿಮೂರು ವರ್ಷದಿಂದ ಮೇಲ್ಪಟ್ಟ ಮಕ್ಕಳ ಮೇಲಿನ ಅತ್ಯಾಚಾರಕ್ಕೆ ಜೈಲು ಶಿಕ್ಷೆ ಎಂದರೆ ಎಷ್ಟು ಉಚಿತ? ಅತ್ಯಾಚಾರಿಯು ಅತ್ಯಾಚಾರಿಯೇ ಆಗುವನು. ಅತ್ಯಾಚಾರ ಮಾಡುವ ಎಲ್ಲಾ ಅಪರಾಧಿಗಳಿಗೆ ಗಲ್ಲು ಶಿಕ್ಷೆಯಾದರೆ ಒಳ್ಳೆಯದೇ ಅಲ್ಲವೇ...!

ಈ ಹಿಂದೆ ನ್ಯಾಯಾಲಯವು ಅತ್ಯಾಚಾರಿಗಳಿಗೆ ಮರಣದಂಡನೆ ಹಾಗೂ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದರು ಸಹ ಯಾವುದೇ ರೀತಿಯಲ್ಲಿ ಅತ್ಯಾಚಾರ ಪ್ರಕರಣಗಳಲ್ಲಿ ಇಳಿಕೆಯು ಕಂಡು ಬಂದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರವೇ ಈ ನಿರ್ಧಾರವನ್ನು ಕೈಗೊಂಡು, ಸುಗ್ರೀವಾಜ್ಞೆಯನ್ನು ಹೊರಡಿಸಿದೆ ಎನ್ನಲಾಗಿದೆ. ಮುಂದೆ ಎಷ್ಟರ ಮಟ್ಟಿಗೆ ಈ ಕಾನೂನು ಪರಿಣಾಮ ಬಿರುತ್ತದೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಭಾರತ ದೇಶದಲ್ಲಿ ಈ ಅತ್ಯಾಚಾರದ ಪ್ರಕರಣವು ನಿಲ್ಲದ ಮಳೆಯಂತಾಗಿದ್ದು, ಇಂತಹ ಸಂದರ್ಭದಲ್ಲಿ ಸರ್ಕಾರವು ಕೊಡೆ ಹಿಡಿಯುವ ಬದಲು ಪ್ಲಾಸ್ಟಿಕ್ ಚೀಲವನ್ನು ಹಿಡಿಯುತ್ತಿದೆ ಎನ್ನಬಹುದಾಗಿದೆ."

## ಸಂಪಾದಕರಿಗೆ ಪತ್ರ

### 'ಕ್ಯಾಂಪಸ್ ಟಾಕ್' - ವಿನೂತನ ಯಶಸ್ವೀ ಕಾರ್ಯಕ್ರಮ

ಮಂಗಳೂರು ವಿವಿ ಯ ಆಸಕ್ತ ಸಮಾನ ಮನಸ್ಕ ವಿದ್ಯಾರ್ಥಿಗಳು ಸೇರಿ 'ಕ್ಯಾಂಪಸ್ ಟಾಕ್' ಎಂಬ ಮಾತು ಮಂಟಪವನ್ನು ಇತ್ತೀಚೆಗೆ ಕಟ್ಟಿದ್ದು, ಮಂಗಳಗಂಗೋತ್ರಿಯಲ್ಲಿ ನಾಂದಿ ಆಯಿತು. ಯಾವುದೇ ಪೂರ್ವಗ್ರಹವಿಲ್ಲದೇ, ಹೆಚ್ಚು ಪ್ರಚಾರವಿಲ್ಲದೆ ನಡೆಸಿದ ಕಾರ್ಯಕ್ರಮ ಯಶಸ್ಸಾಗಿದ್ದು ಮುಂದಕ್ಕೂ ಇಂತಹದೇ ಸಾಹಿತ್ಯಾಸಕ್ತ ಕಾರ್ಯಕ್ರಮಗಳನ್ನು ನಡೆಸಲಿದ್ದಾರೆ.

ನನಗೆ ತುಂಬಾ ಸಂತೋಷ ಕೊಡುವ ವಿಚಾರ ಸುಮಾರು 40–45 ಅಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಸೇರಿದ್ದು ವೇದಿಕೆಯಿಲ್ಲದೆ ಬಯಲಿನಲ್ಲಿ ತಮ್ಮ ಮಾತು, ಸ್ವರಚಿತ ಕವನ, ವಿಮರ್ಶೆಗೆ ಒಡ್ಡಿಕೊಂಡಿದ್ದು, ಕ್ಲಾಸ್ ರೂಮ್ ಹೊರತಾದ ಕಲಿಕೆಯೂ ಸಾಧ್ಯವಿದೆ ಎನ್ನುವುದನ್ನು ಸಾಬೀತುಪಡಿಸಿದಂತಾಯಿತು. ಯುನಿವರ್ಸಿಟಿಯಲ್ಲಿ ಇಂಥಹ ಸೃಜನಶೀಲ ಚಟುವಟಿಕೆಗಳು ನಡೆಯುತ್ತಿದ್ದು, ವಿದ್ಯಾರ್ಥಿಗಳ ಬೌದ್ಧಿಕತೆಗೆ ಮತ್ತು ಸೃಜನಶೀಲ ಚಟುವಟಿಕೆಗಳಿಗೆ ಸಹಕಾರಿಯಾಗಿದೆ.

ಇನ್ನೂ ಹೆಚ್ಚು ಜನ ಇಲ್ಲಿನ ಕಾರ್ಯಕ್ರಮಕ್ಕೆ ಬರಲಿ, ಈ ಸದುದ್ದೇಶಿತ ಚಟುವಟಿಕೆಗಳು ವ್ಯಾಪಕವಾಗಲಿ ಎನ್ನುವುದೇ ನಮ್ಮ ಆಶಯ.

**–ರಾಧಿಕಾ**

## ನೀನ್ಯಾಕೆ ಆಗಬಯಸುವುದಿಲ್ಲ ದೇಶಕಾಯೋ ಶೂರ?

"ಜೈ ಹಿಂದ್', ವಂದೇ ಮಾತರಂ, ಹೀಗೆಲ್ಲ ನಾವೆಲ್ಲರೂ ಜೈಕಾರ ಹಾಕಿದ್ದೀವಿ; ಮುಂದೇನೂ ಹಾಕ್ತಾ ಇರ್ತೀವಿ. ಏನು ಇದರ ಅರ್ಥ? ಯೋಚನೆ ಮಾಡಿ ಸ್ನೇಹಿತರೆ. ಈ ಪದಗಳನ್ನು ನಾವೆಲ್ಲರೂ ಆಗಾಗ ನಮ್ಮ ಮಧುರ ಕಂಠದಿಂದ ಉಚ್ಚರಿಸ್ತಾ ಇರ್ತೀವಿ ಅಲ್ವಾ? ದೇಶಕ್ಕೋಸ್ಕರ ನಾವು ಉದ್ದುದ್ದ ಭಾಷಣ ಮಾಡ್ತೀವಿ, ಸ್ವಾತಂತ್ರ್ಯ, ಗಣರಾಜ್ಯ ದಿನಗಳಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಈ ಪದಗಳನ್ನು ಬಳಸಿಕೊಂಡು ಮಾತಾಡೋದನ್ನು ಕೇಳಿ ನಾವು ಅವರೊಡನೆ ಜೈಕಾರ ಕೂಗಿದ್ದೀವೆ, ನೆನಪಾಯಿತಾ? ನಾವೆಲ್ಲರೂ ಹೆಮ್ಮೆಯಿಂದ ಹೇಳೋ ಎರಡಕ್ಷರ ರೋಮಾಂಚನ ಹುಟ್ಟಿಸುತ್ತೆ ಕ್ರಾಂತಿಯ ಕಿಚ್ಚು ಹುಟ್ಟಿಸುತ್ತೆ. ಆದರೆ ಈ ಪದಗಳನ್ನು ಹೇಳೋಕೆ ನಾವು ಯೋಗ್ಯರಾ? ಕೇಳಿ ಈ ಪ್ರಶ್ನೆ ನಿಮ್ಮಲ್ಲಿ ನೀವು. ಮಾತು ಮಾತಿಗೆ ನಾನು ದೇಶಪ್ರೇಮಿ ಎಂದು ಸತ್ಯಾಗ್ರಹ ಮಾಡೋದಲ್ಲ ದೇಶಪ್ರೇಮ, ಕ್ರಿಕೆಟ್ ಮೈದಾನದಲ್ಲಿ ಬಾವುಟ ಹಾರಾಡಿಸ್ಕೊಂಡು ಕಿರುಚೋದಲ್ಲ ದೇಶಪ್ರೇಮ, ವರುಷಕ್ಕೆರಡು ಸಲ ದೇಶಭಕ್ತಿ ಹಾಡು ಹಾಡಿ ಕುಣಿದು ಕುಪ್ಪಳಿಸೋದಲ್ಲ ದೇಶಪ್ರೇಮ. ಕೇವಲ ದಿನಕ್ಕೊಂದು ಬಾರಿಯಾದ್ರು ದೇಶ ಕಾಯೋ ಯೋಧರಿಗೋಸ್ಕರ ಪ್ರಾರ್ಥಿಸೋದು, ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸೋದು, ಸಮಾಜವನ್ನು ಗೌರವದಿಂದ ನಡೆಸ್ಕೊಂಡು ಹೋಗೋದು ನಿಜವಾದ ದೇಶಪ್ರೇಮ. ಒಮ್ಮೆ ನೆನಪು ಮಾಡ್ಕೊಳ್ಳಿ, ನಾವು ದೇಶಕ್ಕೋಸ್ಕರ ಏನ್ ಮಾಡಿದ್ದೇವೆ ಅಂತಾ, ಉತ್ತರ ನಮ್ಮಲ್ಲಿದೆ.

ಯೋಚನೆ ಮಾಡಿದ್ದೀರ ಒಂದು ಕುಟುಂಬದಲ್ಲಿ ಒಬ್ಬ ಯೋಧನಿದ್ದರೆ ಆ ಕುಟುಂಬ ಎಷ್ಟು ಹೆಮ್ಮೆಯಿಂದ ಹೇಳ್ಕೊಳ್ಳತ್ತೆ, "ನನ್ನ ಮಗ ದೇಶಕ್ಕೆ ಕವಚ, ದೇಶಕಾಯ್ತಾ ಇದ್ದಾನೆ" ಅಂತ. ಅವರ ಕಣ್ಣಲ್ಲಿ ನಿಸ್ವಾರ್ಥ ದೇಶಭಕ್ತಿ ಕಾಣುತ್ತೆ. ಅವರು ನಿಜವಾದ ದೇಶಭಕ್ತರು. ಯಾಕಂದ್ರೆ ಯಾರು ತಮ್ಮ ಮಕ್ಕಳನ್ನು ನಾನು ಸೈನ್ಯಕ್ಕೆ ಸೇರಿಸ್ತೀನಿ ಎಂದು ಎದೆತಟ್ಟಿ ಹೇಳೋದಿಲ್ಲ. ಅಷ್ಟೆ ಯಾಕೆ ಒಬ್ಬ ವೀರಯೋಧ ಹುತಾತ್ಮನಾದಾಗ ಅವರ ಬಗ್ಗೆ ಉದ್ದುದ್ದ ಭಾಷಣ ಮಾಡ್ತಾರಲ್ಲ ನಮ್ಮ ನಾಯಕರು, ನೇತಾರರು, ಅವರ್‍ಯಾರಾದರೂ ತಮ್ಮ ಮಕ್ಕಳನ್ನು ಯೋಧ ಮಾಡ್ತೀವಿ ಅನ್ನೋ ಆಶ್ವಾಸನೆ ಕೊಡೋದನ್ನು ನೋಡಿದ್ದೀರಾ, ಸಾಧ್ಯನೇ ಇಲ್ಲ. ಯಾಕಂದ್ರೆ ಪ್ರತಿಯೊಬ್ಬರಿಗೂ ತಮ್ಮ ಮಕ್ಕಳು ಲಕ್ಷಾಂತರ ರೂಪಾಯಿ ದುಡಿಯೋ ಡಾಕ್ಟರ್, ಇಂಜಿನಿಯರ್‍ಗಳಾಗಬೇಕೆ ಹೊರತು ಕೋಟ್ಯಾಂತರ ಜನರ ಜೀವ ಕಾಯೋ ಯೋಧ ಅಲ್ಲ. ಇಂಥಾ ದೇಶಪ್ರೇಮ ಇದ್ದರೆಷ್ಟು ಬಿಟ್ಟರೆಷ್ಟು. ಇವತ್ತು ಯೋಧರು ಶತ್ರುಗಳೊಡನೆ ನಿರಂತರ ಹೋರಾಡ್ತಿರೋ ಫಲಾನೇ ನಾವೆಲ್ಲರೂ ಇಲ್ಲಿ ನಿಶ್ಚಿಂತೆಯಿಂದ ನಿದ್ದೆ ಮಾಡ್ತಿರೋದು. ಆ ಹಿಮಚಳಿಯ ಮಧ್ಯದಲ್ಲಿ, ಬೆಟ್ಟ ಗುಡ್ಡಗಳಲ್ಲಿ ಇಳಿಜಾರು ಕಾಡಿನಲ್ಲಿ ತಮ್ಮ ನೆನಪುಗಳನ್ನೇ ಕುಟುಂಬ ಮಾಡಿಕೊಂಡು ಪ್ರತಿಕ್ಷಣವು ದೇಶಕ್ಕಾಗಿ ಮುಡಿಪಾಗಿಟ್ಟ ನಮ್ಮ ಯೋಧರೇ ದೇಶದ ಕವಚ. ಇಷ್ಟು ಸೇವೆ ಸಲ್ಲಿಸಿರೋ, ಈಗಲೂ ಹೋರಾಡುತ್ತಲೇ, ಪ್ರಜ್ವಲಿಸುತ್ತಿರೋ ಯೋಧರಿಗೆ ನಮ್ಮಿಂದ ಬೇಕಾಗಿರುವುದು ನಮ್ಮ ಬೆಂಬಲ, ನಮ್ಮ ಛಲ, ಪ್ರೋತ್ಸಾಹ. ಬನ್ನಿ ಒಮ್ಮೆ ನಿಮ್ಮ ಮನಸ್ಸಲ್ಲಿ ಹೇಳಿಕೊಳ್ಳಿ ನಾನಾಗ ಬಯಸುವೆ ವೀರಯೋಧ ಎಂದು. ಯಾವಾಗ ನಮ್ಮಲ್ಲಿ ಗುರಿ ಮೊಳಕೆಯೊಡೆಯುತ್ತದೆಯೋ, ಅಂದು ನಮ್ಮ ದೇಶಕ್ಕೆ ನಿಜವಾದ ಗೆಲುವು ಸಿಗುತ್ತದೆ.

ಹೇ ಶಕ್ತಿಯೇ, ನಮ್ಮ ಯೋಧರಿಗೆ ಕವಚವಾಗಿರು, ವೀರಯೋಧರೆ ನಿಮಗೊಂದು ಸಲಾಂ.

**–ದೀಕ್ಷಿತಾ**

## ಹೆಣ್ಣೆ ನಿನಗೇಕೆ ಶಿಕ್ಷೆ?

ಹೆಣ್ಣು ಯಾವ ಪಾಪ ಮಾಡಿ ಈ ಭೂಮಿಗೆ ಬಂದಿದ್ದಾಳೋ ಗೊತ್ತಿಲ್ಲ. ಭೂಮಿಯ ಯಾವ ಜೀವ ಜಂತುಗಳಲ್ಲಾಗಲಿ, ಎಂಥ ನೆಲದಲ್ಲಾಗಲಿ, ಎಂಥದೆ ಕುಲದಲ್ಲಾಗಲಿ, ಆಕೆಗೆ ಶೋಷಣೆ ತಪ್ಪಿದಲ್ಲ. ಸಕಲ ಜೀವರಾಶಿಯನ್ನು ಪೊರೆವ ಜನ್ಮದಾತೆ ಈಗಲೂ ಪುರುಷ ಜೀವಿಯ ದಬ್ಬಾಳಿಕೆಯಲ್ಲೇ ನರಳುತ್ತಿದ್ದಾಳೆ. ಇಂದು ಹೆಣ್ಣು ನಾನಾ ವಿಧದ ಶೋಷಣೆಗೆ ಬಲಿಯಾಗಿದ್ದಾಳೆ.

ಇಂದು ಹೆಣ್ಣಿಗೆ ಸಮಾಜದಲ್ಲಿ ಒಂದು ಮಹತ್ತರವಾದ ಸ್ಥಾನ ದೊರೆತರೂ ಅದು ಕೇವಲ ಕೆಲವೇ ಸಂದರ್ಭಗಳಿಗೆ ಮಾತ್ರ ಸೀಮಿತವಾಗಿವೆ. ಎಲ್ಲೆಲ್ಲೂ ಕೇಳುವ ಮಾತೆಂದರೆ ಅತ್ಯಾಚಾರ, ಶೋಷಣೆ. ಈ ಅತ್ಯಾಚಾರ ಏಕೆ ನಡೆಯಿತ್ತಿದೆ? ಯಾಕಾಗಿ ಕೇವಲ ಕ್ಷಣ ಮಾತ್ರದ ಸುಖಕ್ಕಾಗಿ ಪುರುಷರು ಹೆಣ್ಣನ್ನು ಬಲಿಕೊಡುತ್ತಿದ್ದಾರೆ. ಹೆಣ್ಣು ಕೇವಲ ಭೋಗವಸ್ತುವೆಂದು ಪರಿಗಣಿಸುವಂತಹ ಪುರುಷಕೇಂದ್ರಿತ ಮನೋಧರ್ಮವನ್ನು ಬದಲಾಯಿಸಲು ಸಾಧ್ಯವಿಲ್ಲವೇ? ಹೆಣ್ಣು ಮಕ್ಕಳಿಗೆ ಸ್ವತಂತ್ರ್ಯವಾಗಿ ಬದುಕುವ ಹಕ್ಕಿಲ್ಲವೆ?

ಸ್ವತಂತ್ರ್ಯವಾಗಿ ಬದುಕುವ ಮಾತಿರಲಿ, ಈ ಸೃಷ್ಟಿಯಲ್ಲಿ ಹೆಣ್ಣಾಗಿ ಅರಳುವ ಜೀವ ಭ್ರೂಣಾವಸ್ಥೆಯಲ್ಲಿ ಕಣ್ಮರೆಯಾಗಿ ಹೋಗಿತ್ತಿದ್ದಾಳೆ. "ತಾಯಿಯಾಗಿ, ಸೋದರಿಯಾಗಿ, ಹೆಂಡತಿಯಾಗಿ, ತ್ಯಾಗಮಯಿಯಾಗಿ, ಸಹನಾಮಯಿಯಾಗಿ ಬೇಕಾದ ಹೆಣ್ಣು ಮಗಳಾಗಿ ಏಕೆ ಬೇಡ?" ಹೆಣ್ಣಿಗೂ ಸಮಾನ ಸ್ಥಾನವಿಲ್ಲವೆ? ಹಿಂದೆ ಹೆಣ್ಣನ್ನು ದೇವತೆ ಎಂದು ಪೂಜಿಸುತ್ತಿದ್ದ ಈ ಸಮಾಜ ಇಂದು ಆಕೆಯ ಜೀವವನ್ನೇ ಬಲಿತೆಗೆದುಕೊಳ್ಳುತ್ತಿದೆಯಲ್ಲಾ ಯಾಕೆ ಹೀಗೆ ಏನಾಗಿದೆ? ಈ ಸಮಾಜ ಎತ್ತ ಸಾಗುತ್ತಿದೆ? ಮಹಿಳೆಯರಿಗೂ ಪುರುಷರಷ್ಟೇ ಸಮಾನವಾಗಿ ಬದುಕುವ ಹಕ್ಕಿದೆ ಮತ್ತು ಮನಸ್ಸಿನ ಇಚ್ಚೆಗಳನ್ನು ಪರಸ್ಪರ ಸಹಭಾಗಿತ್ವದಿಂದ ತೀರಿಸಿಕೊಳ್ಳಬೇಕಾದರೆ ಅದರಲ್ಲಿ ಶಿಷ್ಟಾಚಾರದ ಮಿತಿಯಿರುತ್ತದೆ ಎಂದು ಅರಿತುಕೊಳ್ಳುವುದು ಅತೀ ಅವಶ್ಯ.

ಅಂದು ಮಹಾತ್ಮ ಗಾಂಧೀಜಿ ಕಂಡ ಕನಸು ಮಧ್ಯರಾತ್ರಿ ಒಂದು ಹೆಣ್ಣು ಯಾವುದೇ ಭಯವಿಲ್ಲದೇ ನಿರ್ಭೀತಿಯಿಂದ ನಡೆಯುತ್ತಾಳೋ ಅಂದೇ ಭಾರತ ಸಂಪೂರ್ಣ ಸ್ವಾತಂತ್ರ್ಯ ಎಂದರು. ಆದರೆ ಈಗ ಹಾಡಹಗಲೇ ಹೆಣ್ಣು ನಡೆಯುವಂತಿಲ್ಲ. ಹೆಣ್ಣಿಗೆ ಗಂಡು ತಂದೆಯಾಗಿ, ಗಂಡನಾಗಿ, ಮಗನಾಗಿ ಜೀವನದುದ್ದಕ್ಕೂ ಆಶ್ರಯ ನೀಡುವ ಆಲದ ಮರದಂತಿರಬೇಕಾದವನು ರಾಕ್ಷಸನಾಗುತ್ತಿರುವುದು ದುರ್ದೈವವೇ ಸರಿ. ಆಗುವ ಅನಿಷ್ಟ ಕಾರ್ಯಗಳಿಗೆ ಹೆಣ್ಣಿನ ಕಡೆಗೆ ಬೊಟ್ಟು ಮಾಡಿ ಮಾತನಾಡುತ್ತಾರೆ. ಹೆಣ್ಣು ಇತ್ತೀಚಿನ ದಿನಗಳಲ್ಲಿ ತೊಡುವ ಉಡುಪು ಗಂಡಸರ ಕಣ್ಣು ಕುಕ್ಕುವಂತಿರುತ್ತದೆ. ಇದಕ್ಕೆಲ್ಲಾ ಹೆಣ್ಣೇ ನೇರ ಹೊಣೆ ಎನ್ನುವಂತೆ ದೂರುತ್ತಿದ್ದಾರೆ. ಹಾಗಾದರೆ ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿರುವ ಅತ್ಯಾಚಾರಗಳಿಗೆ ಅವಳು ತೊಡುವ ಉಡುಪು ಕಾರಣವೇ? ಅವರೇನಾದರೂ ದೇಹ ಪ್ರದರ್ಶಿಸುವಂತೆ ಉಡುಪು ತೊಟ್ಟಿರುತ್ತಾರೆಯೇ? ಪುರುಷರು ತಾವು ಮಾಡುವ ತಪ್ಪಿಗೆ ಹೆಣ್ಣಿನ ಮೇಲೆ ತಪ್ಪು ಹೊರಿಸುವುದೇಕೆ?

ಸ್ತ್ರೀಯರನ್ನು ದೇವರೆಂದು ಪೂಜಿಸುವ ಏಕೈಕ ದೇಶ ಭಾರತದಲ್ಲಿ ಮಹಿಳೆಯರನ್ನು ಗೌರವಿಸುವ ಜಾಗದಲ್ಲಿ ದೇವರು ನೆಲಿಸಿರುತ್ತಾನೆಂದು ಹೇಳುವ ಭಾರತೀಯರಲ್ಲಿ ಹೆಣ್ಣು ಮಕ್ಕಳ ಹೀನ ಸ್ಥಿತಿ ತೀವ್ರ ವ್ಯಾಕುಲ ಹುಟ್ಟಿಸುತ್ತದೆ. ಒಂದು ಗಾಡಿಯು ಚಲಿಸಬೇಕಾದರೆ ಅದರ ಎರಡು ಚಕ್ರಗಳು ಸರಿಯಾಗಿರಬೇಕು. ಒಂದು ಚಕ್ರ ದುರ್ಬಲವಾದರೆ ಆ ಗಾಡಿ ಗುರಿಯನ್ನು ತಲುಪಲಾರದು. ಅದೇ ರೀತಿ ಸಮಾಜವೆಂಬುದು ಸಮತೋಲನದಲ್ಲಿರಬೇಕಾದರೆ ಗಂಡು-ಹೆಣ್ಣು ಎಂಬ ಚಕ್ರಗಳು ಸಮನಾಗಿರಬೇಕು. ಭಾರತದ ಪವಿತ್ರ ನೆಲದಲ್ಲಿ ಗಂಡಿನಷ್ಟೇ ಸಮಾನ ಸ್ಥಾನ ದೊರೆತು, ಆಕೆಯ ಜೀವನಕ್ಕೆ ಸ್ಫೂರ್ತಿ ದೊರೆತಾಗ ಈ ದೇಶದ ಅಭಿವೃದ್ಧಿ ಅದಾಗಿಯೇ ಆಗಬಹುದಲ್ಲವೇ? ಇಂತಹ ಸಮಾಜ ಬಾಹಿರ ಕೆಲಸಕ್ಕೆ ಸ್ಪಂದಿಸದೇ ನಾವೆಲ್ಲ ಒಂದೇ ಎಂದು ಬಾಳಿದರೆ ಸ್ವರ್ಗವಾಗಬಹುದಲ್ಲವೇ?

**–ತೇಜಾಕ್ಷಿ.ಕೆ**

# ಬಸ್ತಿಗುಡ್ಡೆಯಲ್ಲೊಂದು ಕುತೂಹಲಕಾರಿ ಜೈನ ಬಸದಿ

ಸುಳ್ಯ ತಾಲೂಕಿಗೆ ಸೇರಿದ ಪ್ರಮುಖ ಪಟ್ಟಣವಾದ ಬೆಳ್ಳಾರೆ ವ್ಯವಹಾರದಲ್ಲಿ ಈಗಲೂ ಪ್ರಸಿದ್ಧಿ. ಆದರೆ ಬೆಳ್ಳಾರೆಯ ಸುತ್ತಮುತ್ತ ಇತಿಹಾಸ ಹುಡುಕುತ್ತಾ ಹೊರಟರೆ ಅಚ್ಚರಿಯೆನಿಸುವಷ್ಟು ಐತಿಹಾಸಿಕ ಸ್ಥಳಗಳಿವೆ. ಆದರೆ ಊರು ಬಿಟ್ಟು ಬೇರೆಲ್ಲೋ ಇತಿಹಾಸ ಹುಡುಕುತ್ತಾ ಸ್ಥಳದ ಐತಿಹ್ಯ ತಿಳಿಯುತ್ತಾ ಚಾರಣವೆಂಬುದು ಅಲೆದಾಡುವ ಅದೆಷ್ಟೋ ಮಂದಿಗೆ ಬೆಳ್ಳಾರೆ ಪರಿಸರದಲ್ಲೇ ಇರುವ ಐತಿಹ್ಯ ಸ್ಥಳಗಳ ಪರಿಚಯವಿಲ್ಲ.

ಇತಿಹಾಸ ಆಸಕ್ತರಿಗೆ ಒಂದು ಕುತೂಹಲಕಾರಿ ಜ್ಞಾನ ಶಾಖೆ. ಕಾಲ ಗರ್ಭದಲ್ಲಿ ಅಡಗಿ ಹೋಗಿರುವ ಅಪೂರ್ವ ವಿಚಾರಗಳನ್ನು ಶೋಧಿಸಿದಾಗ ನೈಜತೆಯ ದರ್ಶನ ಇಲ್ಲಿ ಸಿಗುತ್ತದೆ. ಊರೂರಿಗೊಂದು ಚರಿತ್ರೆ ಇರುತ್ತದೆ. ಕಲ್ಲು ಕಟ್ಟಡಗಳಿಗೊಂದೊಂದು ಇತಿಹಾಸದ ಪುಟಗಳಿರುತ್ತದೆ. ಇವುಗಳ ಗತಕಾಲದ ಗತಿಯನ್ನು ಹಿಂಬಾಲಿಸಿ ವಿಚಾರಿಸಿದರೆ ಸ್ವಾರಸ್ಯಕರ ವಿಚಾರಗಳ ಸಂಗ್ರಹ ಸಾಧ್ಯವಾಗುತ್ತದೆ. ಹಾಗೆಯೇ ಒಂದು ಐತಿಹಾಸಿಕ ಸ್ಥಳವಾದ ಬೆಳ್ಳಾರೆಯ ಬಸ್ತಿಗುಡ್ಡೆ. ಅಂದರೆ ಬಸದಿಯೊಂದಿರುವ ಗುಡ್ಡೆ. ಜೈನ ಧರ್ಮೀಯರ ಐತಿಹ್ಯದ ಕುರುಹು. ಸುಳ್ಯ ತಾಲೂಕಿನ ಬೆಳ್ಳಾರೆಯಿಂದ ಒಂದು ಕಿ.ಮೀ ದೂರ ಕ್ರಮಿಸಿದರೆ ಬಸ್ತಿಗುಡ್ಡೆಯ ದರ್ಶನ ನಮಗಾಗುತ್ತದೆ.

ಒಂದು ಕಾಲದಲ್ಲಿ ಜೈನ ಧರ್ಮೀಯರ ಆರಾಧನಾ ಕೇಂದ್ರವಾದ ಈ ಬಸದಿಯು ಇಂದು ಜನಸಂಪರ್ಕವಿಲ್ಲದೆ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿ ಬಸದಿ ಇದೆ ಎಂಬುದು ಬೇಗನೆ ತಿಳಿದುಬರುವುದಿಲ್ಲ. ಏಕೆಂದರೆ ಪೂರ್ತಿಯಾಗಿ ಕಾಡು ಪೊದೆಗಳಿಂದ ಆವೃತವಾಗಿದೆ. ದೀರ್ಘಕಾಲದ ಚಾರಿತ್ರ್ಯವನ್ನು ತನ್ನ ಗರ್ಭದಲ್ಲಿ ಜೀವಂತವಾಗಿರಿಸಿಕೊಂಡು ಗತಕಾಲದ ಚರಿತ್ರೆಯನ್ನು ಸಾರುತ್ತಿದೆ. ಈ ಬಸದಿಯು ಸುಮಾರು ಸಾವಿರ ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಹಲವು ವರ್ಷಗಳ ಇತಿಹಾಸವನ್ನು ಹೊದಿದ್ದರೂ ಇಂದು ಈ ಬಸದಿಯು ಸಂಪೂರ್ಣವಾಗಿ ಪಾಳುಬಿದ್ದಿದ್ದು ಜನಮನದಿಂದ ಮರೆಯಾಗುವುದರಲ್ಲಿ ಸಂದೇಹವೇ ಇಲ್ಲ. ಇವಕ್ಕೆಲ್ಲಾ ಕಾರಣಗಳನ್ನು ಹುಡುಕಿ ಈ ಬಸದಿಯ ಹಿಂದಿನ ಚರಿತ್ರೆಯನ್ನು ಕೆದಕಿದರೆ, ಎಷ್ಟೋ ವರ್ಷಗಳ ಹಿಂದೆ ಇಲ್ಲಿ ಬಸದಿಯನ್ನು ನೋಡಿಕೊಳ್ಳುತ್ತಿದ್ದ ಜೈನಮನೆತನವೊಂದು ಯಾವುದೋ ಭೀಕರ ರೋಗಕ್ಕೆ ತುತ್ತಾಗಿ ನಶಿಸಿದ ನಂತರ ಇಲ್ಲಿನ ಪೂಜಾಕಾರ್ಯಗಳು ನಿಂತುಹೋಗಿತ್ತು. ಯಾವಾಗ ಈ ಜೈನಮನೆತನ ನಿರ್ಗಮವಾಯಿತೋ ಅಂದಿನಿಂದ ಇಂದಿನವರೆಗೆ ಇಲ್ಲಿ ಯಾವುದೇ ಧಾರ್ಮಿಕ ಕಾರ್ಯಗಳು ನಡೆದಿಲ್ಲ. ಯಾವುದೇ ಜೈನಮನೆತನ ಇಲ್ಲಿ ಇಲ್ಲದೇ ಇರುವುದು ಕೂಡ ಬಸದಿಯ ಪುನರ್ ನಿರ್ಮಾಣ ನಡೆಯದಿರಲು ಕಾರಣವಾಗಿರಬಹುದು. ಪ್ರಸ್ತುತ ಇದು ಪೂರ್ಣವಾಗಿ ಶಿಥಿಲಗೊಂಡಿದ್ದು ಕೇವಲ ಕಲ್ಲಿನ ಮಂಟಪ ಮಾತ್ರ ಇದೆ. ಮಂಟಪದ ಪಾರ್ಶ್ವಭಾಗದಲ್ಲಿರುವ ಕಲ್ಲಿನ ಆಧಾರ ಕಂಬಗಳು ಕುಸಿದು ಬಿದ್ದಿವೆ. ಬಸದಿಯ ಗರ್ಭಗುಡಿಯ ಮೇಲ್ಛಾವಣಿಯ ಒಳಭಾಗದ ಕಲ್ಲಿನಲ್ಲಿ ಆಕರ್ಷಕವಾದ ವಿನ್ಯಾಸದಲ್ಲಿ ಶಿಲ್ಪಗಳನ್ನು ರಚಿಸಲಾಗಿದೆ.

ಗರ್ಭಗುಡಿಯ ಮಧ್ಯಭಾಗದಲ್ಲಿ ಕಲ್ಲಿನ ದೇವರ ಪೀಠವಿದೆ. ಗುಡಿಯ ಪಶ್ಚಿಮಕ್ಕೆ ದೇವರಿಗೆ ಅಭಿಷೇಕ ಮಾಡಿದ ತೀರ್ಥ ನೀರು ಹರಿದು ಹೋಗಲು ಮಾಡಿರುವ ಶಿಲಾವಿನ್ಯಾಸವಿದೆ. ಬಸದಿಯ ಬಲಭಾಗದಲ್ಲಿ ಯಾವುದೋ ಗುಡಿ ಇದ್ದ ಕುರುಹುಗಳಿದ್ದು ಹಲವು ವರ್ಷಗಳ ಹಿಂದೆ ಪೂಜಾಕಾರ್ಯಗಳು ನಡೆಯುತ್ತಿದ್ದವು ಎಂಬುದು ಖಚಿತವಾಗುತ್ತದೆ. ಇಂದು ಸಂಪೂರ್ಣ ಗಿಡ ಗಂಟಿಗಳಿಂದ ತುಂಬಿಹೋಗಿದೆ.

ಬಸದಿಯ ಮುಂಭಾಗದಲ್ಲಿ ಸುಮಾರು ಹತ್ತು ಅಡಿಗಳಷ್ಟು ಅಂತರದಲ್ಲಿ ಬಾವಿಯನ್ನು ಕಾಣಬಹುದು. ಈ ಬಾವಿಯ ಎಪ್ಪತ್ತು ಫೀಟ್ ಆಳವಿದೆ ಎನ್ನುತ್ತಾರೆ. ಬಸದಿಗೆ ಸಂಬಂಧಿಸಿದ ಬಾವಿಗೆ ಚಿನ್ನಾಭರಣ ಮತ್ತು ಜೈನರ ದೇವರ ವಿಗ್ರಹಗಳನ್ನು ಹಾಕಲಾಗಿದೆ. ಇಂದು ಇದರ ನೀರು ಕಸಕಡ್ಡಿಗಳಿಂದ ತುಂಬಿಹೋಗಿದ್ದು ಸುತ್ತಲೂ ಪೊದೆಗಳು ತುಂಬಿಕೊಂಡು ಬಾವಿಯೇ ಕಾಣದಂತಾಗಿದೆ. ಬಾವಿಯಲ್ಲಿ ಹಾಕಲಾಗಿರುವ ವಿಗ್ರಹಗಳನ್ನು ತೆಗೆದು ಅವುಗಳನ್ನು ಮರುಪ್ರತಿಷ್ಠಾಪನೆ ಮಾಡಿದರೆ ಬಸ್ತಿಗುಡ್ಡೆಯ ಬಸದಿ ಊರಲ್ಲೊಂದು ವಾಸ್ತುಶಿಲ್ಪ ಕೇಂದ್ರವಾಗಿ ಕಂಗೊಳಿಸಲು ಸಾಧ್ಯ.

-ತೇಜಾಕ್ಷಿ.ಕೆ

# ಚಾರಣಪ್ರಿಯರ ಸ್ವರ್ಗ ಬಿಸ್ಲೆ ಘಾಟ್



ಎತ್ತ ನೋಡಿದರೂ ಹಚ್ಚ ಹಸಿರಿನಿಂದ ಕೂಡಿರುವ ಪರಿಸರ... ನಡುವೆ ಮನಸ್ಸಿಗೆ ಮುದ ನೀಡುವ ಪಕ್ಷಿಗಳ ಕಲರವ. ಅಲ್ಲಲ್ಲಿ ಬೆಳ್ನೊರೆಗಳನ್ನು ಚಿಮ್ಮಿಸುತ್ತಾ, ಸ್ವತಂತ್ರ್ಯದ ಪ್ರತೀಕವೆಂಬಂತೆ ಹರಿಯುವ ನದಿ ತೊರೆಗಳ ಜುಳು ಜುಳು ನಾದ. ವಾಹನ ಸವಾರಿಯಲ್ಲಿ ಸಾಹಸಕತೆಯನ್ನು ಬಯಸುವವರಿಗೆ ಹೇಳಿ ಮಾಡಿಸುವಂತಿರುವ ರಸ್ತೆಗಳು. ಒಟ್ಟಾರೆಯಾಗಿ ಪ್ರಕೃತಿ ಮಾತೆಯೇ ಮೈ ತಳೆದು ನಿಂತಿದ್ದಾಳೇನೋ ಎಂದು ಕಣ್ಣಿಗೆ ಭಾಸವಾಗುವಂತಹ ರಮಣೀಯತೆ. ಇದು ಪ್ರಕೃತಿ ಪ್ರಿಯರನ್ನು, ಚಾರಣಾಸಕ್ತರನ್ನು ಕೈಬೀಸಿ ಕರೆಯುವ ಬಿಸ್ಲೆ ಘಾಟ್‌ನ ದೃಶ್ಯತೆ. ದಕ್ಷಿಣ ಕನ್ನಡ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ ಹೊಂದಿಕೊಂಡಿರುವ ಬಿಸ್ಲೆ ಘಾಟ್ ಮನಸ್ಸಿನ ಏಕಾತನತೆಯನ್ನು ಕಳೆದು ನೆಮ್ಮದಿಯ ಭಾವನೆಗಳನ್ನು ಅರಳಿಸುವ ಒಂದು ನೈಸರ್ಗಿಕ ಕೇಂದ್ರ.

ಕುಕ್ಕೆ ಸುಬ್ರಹ್ಮಣ್ಯದಿಂದ ಹೊರಟರೆ, ಸಕಲ ಚರಾಚರ ಚೇತನದಾಯಿನಿಯಾದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಿಂದ ಆರಂಭವಾಗುವ ಘಾಟ್‌ನಲ್ಲಿ ಸಂಚರಿಸುವುದೇ ಒಂದು ದಿವ್ಯ ಅನುಭವ. ಈ ಪರಿಸರದಲ್ಲಿ ಅನೇಕ ವೈದ್ಯಕೀಯ ಗಿಡಮೂಲಿಕೆಗಳು,ವಿಶಿಷ್ಟಜಾತಿಯ ಮರಗಿಡಗಳು, ಅಪರೂಪದ ಪ್ರಾಣಿಪಕ್ಷಿಗಳು ಕೂಡ ಇದ್ದು ಪ್ರಕೃತಿ ಮಾತೆ ಅದರಿಂದ ತನ್ನ ಒಡಲನ್ನು ತುಂಬಿಸಿಕೊಂಡಿದ್ದಾಳೆ. ಘಾಟ್ ಮಧ್ಯದಲ್ಲಿ ಸಿಗುವ ಅಡ್ಡಹೊಳೆಯೂ ವರ್ಷಪೂರ್ತಿ ತುಂಬಿ ಹರಿಯುತ್ತಿದೆ. ಬಿಸ್ಲೆ ಘಾಟಿಯಲ್ಲಿ ಸಂಚಾರ ಮುಂದುವರೆದಂತೆ ವೀಕ್ಷಣಾ ಮಂದಿರವೊಂದು ಎದುರಾಗುತ್ತದೆ. ಪ್ರಕೃತಿಯ ಸೋಜಿಗವನ್ನು ಸವಿಯಲು ಆಧುನಿಕವಾಗಿ ನಿರ್ಮಿಸಿರುವ ಈ ಮಂದಿರದಲ್ಲಿ ನಿಂತು ಸುತ್ತ ಒಮ್ಮೆ ಕಣ್ಣಾಡಿಸಿದರೆ, ಬೇರೆಲ್ಲೂ ಕಾಣಸಿಗದ ಪ್ರಾಕೃತಿಕ ದರ್ಶನವಾಗುತ್ತದೆ. ದೃಷ್ಟಿ ನೇರ ಮಾಡಿ ನೋಡಿದಾಗ ಕುಮಾರ ಪರ್ವತದ ರಮಣೀಯ ನೋಟ, ಕೆಳಗಡೆ ಕ್ಷೀರ ಸಾಗರದಂತೆ ಕಾಣುವ ಝರಿಗಳು ನೋಡುಗರ ಕಣ್ಮನ ಸೆಳೆಯುತ್ತದೆ. ಕವಿ ಹೃದಯಿ ರಚಿಸಿದ "ಸಹಜ ಸುಂದರ ಸೃಷ್ಟಿ ಮಂದಿರ ಋತು ವಿಲಾಸವೋ ಬಂಧುರ..." ಎಂಬ ಹಾಡು ಇಲ್ಲಿ ನಿಂತಾಗ ನೋಡುಗರ ಕವಿಗಳಲ್ಲಿ ಗುಂಯಿಗುಡದೆ ಇರದು.

ರಾಜ್ಯದ ಪ್ರಸಿದ್ಧ ಘಾಟ್‌ಗಳಲ್ಲೊಂದಾದ ಚಾರ್ಮಾಡಿ ಘಾಟ್‌ನಂತೆಯೇ ಬಿಸ್ಲೆ ಘಾಟ್ ರಸ್ತೆ ಕೆಲವೆಡೆ ಅತ್ಯಂತ ಕಿರಿದಾಗಿದ್ದು, ಅನೇಕ ತಿರುವುಗಳಿಂದ ಕೂಡಿದೆ. ಇದರಲ್ಲಿ ಸಂಚರಿಸುವುದೇ ಒಂದು ರೀತಿಯ ವಿಭಿನ್ನ ಅನುಭವ. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಕುಕ್ಕೆ ಸುಬ್ರಹ್ಮಣ್ಯದಿಂದ ಬೆಂಗಳೂರಿಗೆ ಈ ರಸ್ತೆಯಲ್ಲಿ ಬಸ್ ಸಂಚಾರವಿದೆ. ವೀಕ್ಷಣಾ ಮಂದಿರದ ನಂತರ ಬಿಸ್ಲೆ ಎಂಬ ಪುಟ್ಟ ಹಳ್ಳಿ ಸಿಗುತ್ತದೆ. ಅದರ ಅಕ್ಕಪಕ್ಕದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಹಲವರು ವರುಷಗಳ ಹಿಂದೆ ಬ್ರಿಟಿಷರು ನಿರ್ಮಿಸಿದ್ದ "ರಿಜಿಡ್ ಪಾಯಿಂಟ್" ಕೂಡ ಇಲ್ಲಿದೆ. ಇಂತಹ ಪ್ರಾಕೃತಿಕ ಸೌಂದರ್ಯದ ಮಡಿಲಿಗೆ ಪ್ರತಿನಿತ್ಯ ನೂರಾರು ಚಾರಣಿಗರು, ಪರಿಸರ ಪ್ರೇಮಿಗಳು ಭೇಟಿ ನೀಡುತ್ತಾರೆ. ರಜಾ ದಿನಗಳಲ್ಲಾದರೆ ಪ್ರವಾಸಿಗರ ಸಂಖ್ಯೆ ಸಾವಿರ ದಾಟುತ್ತದೆ. ಮಳೆಗಾಲ ಮುಗಿಯುತ್ತಿದ್ದಂತೆ ಈ ಪ್ರದೇಶದವು ಮಂಜಿನಿಂದಾವೃತ್ತವಾಗುತ್ತದೆ. ಇದು ಪ್ರಕೃತಿ ಪ್ರಿಯರನ್ನು ಮತ್ತಷ್ಟು ಸೆಳೆಯುತ್ತದೆ.

-ಅರುಣ್ ಕೆ. ಆರ್

# ಭೌತಶಾಸ್ತ್ರ ಅಂತರಾಷ್ಟ್ರೀಯ ಕಾರ್ಯಗಾರ




ಮಂಗಳೂರು ವಿವಿಯ ಭೌತಶಾಸ್ತ್ರ ವಿಭಾಗ ಆಯೋಜಿಸಿದ್ದ ಅಂತರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಪ್ರೊ. ಚೆನ್ನುಪತಿ ಜಗದೀಶ್ ಮಾತನಾಡುತ್ತಿರುವುದು.

ಮಂಗಳಗಂಗೋತ್ರಿ: ವಿದ್ಯಾರ್ಥಿಯಾಗಿ ಅಥವಾ ನಮ್ಮ ಸ್ಥಳದಲ್ಲಿ ಅಗತ್ಯವೆನಿಸುವ ಮಾನವೀಯತೆ ಮತ್ತು ನಮ್ಮ ತಾಯ್ನಾಡಿಗೆ ಅದರಿಂದ ಆಗುವ ಲಾಭವೇನು ಎನ್ನುವುದರ ಕುರಿತು ಯೋಚಿಸಬೇಕು. ವಿಜ್ಞಾನ ಕ್ಷೇತ್ರದಲ್ಲಿ ಪ್ರಯೋಗಗಳು ಇತರ ಕ್ಷೇತ್ರದ ಪ್ರಯೋಗಗಳಿಗಿಂತ ವೇಗವಾಗಿ ತಲುಪುತ್ತದೆ ಎಂದು ಆಸ್ಟ್ರೇಲಿಯನ್ ನ್ಯಾಷನಲ್ ಯುನಿವರ್ಸಿಟಿ ಕ್ಯಾನ್‌ಬೆರಾದ ಪ್ರೊ. ಚೆನ್ನುಪತಿ ಜಗದೀಶ್ ಇತ್ತೀಚಿಗೆ ತಿಳಿಸಿದರು.

ಭೌತಶಾಸ್ತ್ರದ ಅಧ್ಯಯನ ಇಲಾಖೆಯ ವಸ್ತುವಿಜ್ಞಾನ ಮತ್ತು ಬಯೋಫಿಸಿಕ್ಸ್ ನಲ್ಲಿ ಇತ್ತೀಚಿನ ಬೆಳವಣಿಗೆಗಳ ಕುರಿತು ಆಯೋಜಿಸಿದ ಅಂತರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಭೌತಶಾಸ್ತ್ರದ ಮತ್ತು ವಸ್ತು ವಿಜ್ಞಾನದ ಭವಿಷ್ಯವು ವಿದ್ಯಾರ್ಥಿಗಳ ಕೈಯಲ್ಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಲಿಯುವಿಕೆ ಜೊತೆಗೆ ಪ್ರಕಾಶಮಾನವಾದ ವಿಚಾರಗಳೊಂದಿಗೆ ಮುಂದುವರೆಯಬೇಕಾಗಿದೆ, ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿವಿಯ ಕುಲಪತಿ ಪ್ರೊ. ಕೆ. ಭೈರಪ್ಪ ಮಾತನಾಡಿ, ಭೌತಶಾಸ್ತ್ರ ಮತ್ತು ವಸ್ತುವಿಜ್ಞಾನದೆಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಈ ಸಮ್ಮೇಳನವು ವಿದ್ಯಾರ್ಥಿಗಳಲ್ಲಿನ ಅಭಿಪ್ರಾಯಗಳನ್ನು ಮತ್ತು ಆಲೋಚನೆಗಳನ್ನು ಪರಸ್ಪರ ಸಂಭಾಷಣೆ, ಚರ್ಚೆ, ವಿಮರ್ಶೆಗಳ ಮೂಲಕ ಮುಕ್ತವಾಗಿ ಹಂಚಿಕೊಳ್ಳಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೊ. ಜಗದೀಶ್ ಅವರು ಸಮ್ಮೇಳನದ ಕಾರ್ಯವಿಧಾನದ ಪುಸ್ತಕವನ್ನು ಅನಾವರಣಗೊಳಿಸಿದರು. ವಿವಿಯ ಕುಲಸಚಿವ ಪ್ರೊ. ನಾಗೇಂದ್ರ ಪ್ರಕಾಶ್, ಸಮ್ಮೇಳನದ ಸಂಯೋಜಕ ಪ್ರೊ. ನಾರಾಯಣ ಎರೂಲ್ ಹಾಗೂ ಸಹ ಸಂಯೋಜಕ ಪ್ರೊ. ರವೀಂದ್ರಾಚಾರಿ ಉಪಸ್ಥಿತರಿದ್ದರು.

# ಕನ್ನಡ ಚಿತ್ರರಂಗದ ಬಹುಮುಖ ಪ್ರತಿಭೆ ಕಾಶಿನಾಥ್



ಕಾಶಿನಾಥ್ ಅವರು ಒಬ್ಬ ಕನ್ನಡದ ಅತ್ಯುನ್ನತ ನಟ, ನಿರ್ದೇಶಕರು ಮತ್ತು ನಿರ್ಮಾಪಕರು. ಕನ್ನಡ, ಹಿಂದಿ ಮತ್ತು ಮಲಯಾಳಂ ಚಲನಚಿತ್ರಗಳಲ್ಲಿ ಕೆಲಸ ಮಾಡಿದ ಹಿರಿಮೆ ಅವರದ್ದು. ಕಾಶಿನಾಥ ಅವರು ಸಾಮಾನ್ಯ ವ್ಯಕ್ತಿಗಳಲ್ಲಿ ಸಾಮಾನ್ಯರಾಗಿಯೇ ಉಳಿದವರು. ಸದಾ ಹೊಸತನಕ್ಕೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಹೊಸ ಪ್ರತಿಭೆಗಳ ಕೌಶಲ್ಯವನ್ನು ಗುರುತಿಸಿ ಅದನ್ನು ಹೊರತರುವ ಕೆಲಸ ಮಾಡುತ್ತಿದ್ದರು. ಉಪೇಂದ್ರ, ವಿ. ಮನೋಹರ್ ಅಂತಹ ದಿಗ್ಗಜ ಕಲಾವಿದರನ್ನು ಕನ್ನಡ ಚಿತ್ರ ರಂಗಕ್ಕೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹೀಗೆ ಅನೇಕ ಹೊಸ ಹೊಸ ಪ್ರತಿಭೆಗಳನ್ನು ಕನ್ನಡ ಚಿತ್ರ ರಂಗಕ್ಕೆ ಪರಿಚಯಿಸಿದ ಖ್ಯಾತಿ ಅವರದ್ದು.

ಮೂರು ದಶಕಗಳವರೆಗೆ ವೃತ್ತಿಜೀವನದಲ್ಲಿ 40ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಅವರು, 1951 ರಂದು ಕುಂದಾಪುರ ಸಮೀಪದ ಕೋಟೇಶ್ವರದಲ್ಲಿ ಜನಿಸಿದರು. ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ವ್ಯಾಸಾಂಗ ಮುಗಿಸಿದರು. ಕಾಶಿನಾಥ್ ಅವರ ತಂದೆ ಒಬ್ಬ ಶ್ರೇಷ್ಠ ವಿಜ್ಞಾನಿ. ಹಾಗಾಗಿ ಕಾಶಿನಾಥ್ ಅವರು ಸಹ ಒಬ್ಬ ಶ್ರೇಷ್ಠ ವಿಜ್ಞಾನಿಯಾಗಬೇಕೆಂಬ ಆಸೆ ಅವರದಾಗಿತ್ತು. ಆದರೆ ಕಾಶಿನಾಥ್ ಅವರು ಚಿಕ್ಕಂದಿನಿಂದಲೂ ಸಿನಿಮಾದ ಕುರಿತು ವಿಪರೀತ ಅಭಿಮಾನವನ್ನು ಕಟ್ಟಿಕೊಂಡಿದ್ದರಿಂದ ಸಿನಿಮಾ ರಂಗಕ್ಕೆ ಕಾಲಿಟ್ಟರು. ನಂತರ 1976 ರಲ್ಲಿ ತಮ್ಮ ತಂದೆಯಿಂದ ಹಣವನ್ನು ಎರವಲು ಪಡೆದು 'ಅಪರೂಪದ ಅತಿಥಿಗಳು' ಎಂಬ ಹಾಸ್ಯನಾಟಕವನ್ನು ನಿರ್ಮಿಸಿದರು. ಇವರ ಕೆಲವು ಚಿತ್ರಗಳು ಎರಡಥ–ರ್ʼವನ್ನು ಒಳಗೊಂಡಿದ್ದರಿಂದ ಹಲವು ಟೀಕೆಗೆ ಒಳಗಾಗಿತ್ತು, ಆದರೆ ಸಾಮಾನ್ಯವಾಗಿ ಇವರ ಚಿತ್ರಗಳು ಸಮಾಜ ಮತ್ತು ಉದ್ಯಮಗಳ ಮೇಲೆ ಪ್ರಭಾವ ಬೀರುತ್ತದೆ.

ಕಾಶಿನಾಥ್ ಅವರು 1980ರ ದಶಕದಲ್ಲಿ ಕನ್ನಡ ಚಿತ್ರ ರಂಗದಲ್ಲಿ ಹೊಸ ಅಲೆಯನ್ನು ಎಬ್ಬಿಸಿ, ಅದರ ದಿಕ್ಕನ್ನೇ ಬದಲಾಯಿಸಿದ ಅಪ್ರತಿಮ ಕಲಾವಿದರು. 1971–72 ರಲ್ಲಿ ಬೆಂಗಳೂರಿನಲ್ಲಿ 'ಸ್ಲಿಪ್' ಎಂಬ ಶೀರ್ಷಿಕೆಯ ಕಿರುಚಿತ್ರ ಮಾಡಿದ್ದರಿಂದ 'ಅಸೀಮಾ' ಎಂಬ ಚಿತ್ರತಂಡಕ್ಕೆ ಸೇರಲು ಸಹಾಯಕವಾಯಿತು. ಅವರ ನಿರ್ದೇಶನದಲ್ಲಿ ಮೂಡಿ ಬಂದ 'ಅಪರಿಚಿತ' ಚಿತ್ರವು ಸಸ್ಪೆನ್ಸ್ ಥ್ರಿಲ್ಲರ್ ಚಿತ್ರವಾಗಿದ್ದರಿಂದ ಅವರಿಗೆ ಹೆಸರು ತಂದುಕೊಟ್ಟಿತು. ಅನುಭವ ಚಿತ್ರದ ಮೂಲಕ ನಾಯಕ ನಟನಾಗಿ 1984 ರಲ್ಲಿ ಚೊಚ್ಚಲ ಪ್ರವೇಶ ಮಾಡಿದರು. ಈ ಚಿತ್ರವು ಅವರಿಗೆ ಮೆಚ್ಚುಗೆಯನ್ನು ತಂದುಕೊಟ್ಟಿತು. ಅಲ್ಲದೇ ಇದೇ ಚಿತ್ರವನ್ನು ಹಿಂದಿ ಮತ್ತು ಮಲಯಾಳಂನಲ್ಲಿ ರಿಮೇಕ್ ಮಾಡಲಾಯಿತು. ಈ ಚಿತ್ರವು ಶ್ರೇಷ್ಠ ಸ್ಥಾನವ ಥಿ ನ್ನು ತಲುಪಿತು, ತದನಂತರ ಅವಳೆ ನನ್ನ ಹೆಂಡ್ತಿ, ಸುರ ಸುಂದರಾಂಗ, ಮನ್ಮಥರಾಜ ಮತ್ತು ಅವರದೇ ನಿರ್ದೇಶನದ ಅನಾಮಿಕ, ಅನಂತನ ಅವಾಂತರ ಚಿತ್ರಗಳು ಅತಿ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟಿತು. ಹಾಗೇ 1980 ರ ದಶಕದ ಬೇಡಿಕೆಯ ನಟನಾಗಿ ಮಾಡಿತು. ಬದುಕು ಜಟಕಾಬಂಡಿ, ಹಲೋ ಯಮ, ಚೋರ್ ಗುರು ಚಂಡಾಳ್ ಶಿಷ್ಯಾ, ರಂಬೆ ಊರ್ವಶಿ ಮೇನಕೆ ಮತ್ತು ಮಾವ ಮಾವ ಮದುವೆ ಮಾಡೋ ಮೊದಲಾದ ಚಿತ್ರಗಳು ಬಾಕ್ಸ್‌ಆಫೀಸ್‌ನ್ನು ಕೊಳ್ಳೆ ಹೊಡೆಯಿತು. ಅಪ್ಪಚ್ಚಿ ಚಿತ್ರವನ್ನು 2007 ರಲ್ಲಿ ನಿರ್ದೇಶಿಸಿ ನಟಿಸಿದರು, ಅದೇ ಅವರ ಕೊನೆಯ ನಿರ್ದೇಶನದ ಚಿತ್ರವಾಯಿತು. ಗಣೇಶ ಅಭಿನಯದ ಜೂಮ್ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ನಟಿಸುವ ಮೂಲಕ ಮರಳಿದರು. 2017 ರಲ್ಲಿ ಚೌಕ ಚಿತ್ರದಲ್ಲಿ ಜೈಲು ಖೈದಿಗಳಲ್ಲಿ ಒಬ್ಬನಾಗಿ ನಟಿಸಿ ಪೋಷಕ ಪಾತ್ರದಲ್ಲಿ ಮಿಂಚಿದರು.

ಕಾಶಿನಾಥ್ ಅವರು ನಟಿಸಿ, ನಿರ್ದೇಶಿಸಿದ ಕೆಲವು ಚಲನಚಿತ್ರಗಳು ಭಾರತೀಯ ಭಾಷೆಗಳಲ್ಲಿ ಮರು ನಿರ್ದೇಶಿಸಿಲ್ಪಟ್ಟಿತು. ಅಪರಿಚಿತ ಚಿತ್ರವು ಮಲಯಾಳಂನಲ್ಲಿ 'ಅವನೋ ಅಥೋ ಅವಳೋ' ಮತ್ತು ಹಿಂದಿ ಭಾಷೆಯಲ್ಲಿ 'ಬಿಶಾಕ್' ಎಂದು, ಅನುಭವ ಚಿತ್ರವು ಹಿಂದಿಯಲ್ಲಿ ಅನುಭವ್ ಮತ್ತು ಮಲಯಾಳಂನಲ್ಲಿ ಅನುಭವಮ್ ಎಂದು ಕಾಶಿನಾಥ್ ಅವರೇ ಪುನಃ ಚಿತ್ರಿಸಿದರು. ಆ ಚಿತ್ರಗಳು ಯಶಸ್ಸು ಕಾಣದಿದರೂ, ತನ್ನ ಪ್ರತಿಭೆಯನ್ನು ಗುರುತಿಸಿಕೊಳ್ಳಲು ಸ ಹಾ ಂ ು ು ವಾ ಯಿ ು ತ ು .

ಒಬ್ಬ ನಟನ ಸಾಧನೆಗೆ ಸೌಂದರ್ಯ ಅಥವಾ ಬಾಹ್ಯ ಚಹರೆಯಾಗಲಿ ಮತ್ತು ಇತರ ಯಾವುದೇ ಮುಖ್ಯವಾಗುವುದಿಲ್ಲ, ಅವನಿಗೆ ಕೌಶಲ್ಯ ಪ್ರತಿಭೆ ಇದ್ದರೆ ಸಾಕು ಎಂದು ತೋರಿಸಿ ಕೊಟ್ಟವರು ಕಾಶಿನಾಥ. ಪ್ರತಿಯೊಂದು ಹಾದಿಯಲ್ಲಿ ಯಶಸ್ಸು ಕಾಣಬೇಕಾದರೆ ಮೂರು ವಿಷಯವನ್ನು ಸದಾ ನೆನಪಿನಲ್ಲಿಡಬೇಕೆಂದು ಹೇಳಿದ್ದರು, ಅವು ಗಮನಿಸು, ವಿಶ್ಲೇಷಿಸು, ಸಂಪರ್ಕಿಸು ಇವುಗಳ ಪಾಲನೆಯಿಂದ ಅವರ ದಿನಚರಿಯು ಮುಂದುವರಿಯುತ್ತಿತ್ತು. ಅವರ ಈ ಮಾತುಗಳು ಅನೇಕ ವ್ಯಕ್ತಿಗಳಿಗೆ, ಅಭಿಮಾನಿಗಳಿಗೆ ಸ್ಫೂರ್ತಿಯನ್ನು ನೀಡಿತು. ಅವರ ವೈಯಕ್ತಿಕ ಜೀವನದಲ್ಲಾಗುವಂತಹ ಯಾವುದೇ ಅಹಿತಕರ ಘ ೕ ಟ ನ ೆ ೂ ಂ ು ೆ ು ನ ೆ ು ್ ಹಂಚಿಕೊಳ್ಳುತ್ತಿರಲಿಲ್ಲ. ಏಕೆಂದರೆ ಅವರಿಂದ ಬೇರೆಯವರಿಗಾಗಲಿ ಅವರ ಕೆಲಸಕ್ಕಾಗಲಿ ಯಾವುದಕ್ಕೂ ತೊ ಂ ದ ರೆ ಯ ಾ ಗ ಬಾ ರ ದೆ ಂ ಬ ಆಶಯ ಅವರದ್ದಾಗಿತ್ತು. ಇದು ಅವರ ವ್ಯಕ್ತಿತ್ವವನ್ನು ಗುರುತಿಸುತ್ತದೆ. ಹೀಗೆ, ಕಾಶಿನಾಥ್ ಅವರು ಸಾಮಾನ್ಯ ವ್ಯಕ್ತಿಗಳಲ್ಲಿ ಸಾಮಾನ್ಯರಾಗಿಯೇ ಅ ಜ ರಾ ವ ು ರ ರಾ ಗಿ ಂ ು ೀ ಉಳಿದಿದ್ದಾರೆ. ಅವರ ಜೀವನದ ಹಾದಿಯು ಎಲ್ಲರಿಗೂ ಸ್ಫೂರ್ತಿಯಾಗಿದೆ.

–ನಾಗೇಂದ್ರ. ಬಿ

## ಚಿತ್ರ ವಿಮರ್ಶೆ

# ಪದ್ಮಾವತ್ – ಮನಮೋಹಕ ದೃಶ್ಯಕಾವ್ಯ

ಪಡಬಾರದ ಕಷ್ಟಪಟ್ಟು ಕೊನೆಗೂ ಥಿಯೇಟರ್ ಕದ ತಟ್ಟಿದ ಭಾರತೀಯ ಚಿತ್ರ. ಮುಗಿಯದ ವಿವಾದ, ಕುತೂಹಲ ಹೆಚ್ಚಿಸಿದ ಚಿತ್ರದ ದೃಶ್ಯಗಳು, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎದುರಾದ ಸವಾಲು ಹೀಗೆ ಪದ್ಮಾವತ್ ಸಿನಿಮಾ ಹೆಜ್ಜೆ ಹೆಜ್ಜೆಯಲ್ಲೂ ಸಾಕಷ್ಟು ನೋವು ಅನುಭವಿಸಿದೆ. ಬನ್ಸಾಲಿಯಂತಹ ದಿಗ್ಗಜ ನಿರ್ದೇಶಕನ್ನು ಅನಾಮತ್ತಾಗಿ ಅಲ್ಲಾಡಿಸಿದ ಈ ಸಿನಿಮಾ ಕೊನೆಗೂ ಪ್ರೇಕ್ಷಕರಿಗೆ ದರ್ಶನ ನೀಡಿದೆ.

ಚಿತ್ತೋರ್‌ನ ರಾಜ ಮಹಾರಾವಲ್ ರತನ್ ಸಿಂಗ್ (ಶಾಹೀದ್ ಕಪೂರ್), ರಾಣೀ ಪದ್ಮಾವತಿ(ದೀಪಿಕಾ ಪಡುಕೋಣೆ) ಹಾಗೂ ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ (ರಣ್‌ವೀರ್ ಸಿಂಗ್) ಸುತ್ತ ನಡೆಯುವ ಕಥೆಯೇ ಪದ್ಮಾವತ್ ಚಿತ್ರ.

ಚಿತ್ರವನ್ನು ಆರಂಭದಿಂದಲೇ ಹಿನ್ನಲೆ ಸಂಗೀತ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಇಲ್ಲಿಂದ ನಂತರ ಸಂಪೂರ್ಣವಾಗಿ ಅಧ್ಭುತವಾದ ದೃಶ್ಯಕಾವ್ಯವೊಂದು ಪ್ರೇಕ್ಷಕರೆದುರು ತೆರೆದುಕೊಳ್ಳುತ್ತದೆ. ಇದಕ್ಕೆ ಪೂರಕವಾಗಿ ಸುದೀಪ್ ಚಟರ್ಜಿ ಛಾಯಾಗ್ರಹಣ ಸಾಥ್ ನೀಡುತ್ತದೆ. ಬನ್ಸಾಲಿ ಸಿನಿಮಾ ಅಂದ್ರೆ ಅದೊಂದು ಸುಂದರ ಫ್ರೇಮ್‌ಗಳ ಅಚ್ಚುಕಟ್ಟಾದ ಜೋಡಣೆ ಎನ್ನುವ ಮಾತು ಪದ್ಮಾವತ್ ಮೂಲಕ ಮತ್ತೆ ಸಾಬೀತಾಗಿದೆ.

ಪದ್ಮಾವತಿ ಪಾತ್ರಕ್ಕೆ ಬಹುಶಃ ದೀಪಿಕಾ ಪಡುಕೋಣೆ ಸೂಕ್ತ ಆಯ್ಕೆ. ಕಣ್ಣಿನಿಂದಲೇ ಹಲವು ದೃಶ್ಯಗಳಲ್ಲಿ ನೋಡುಗರನ್ನು ಗೆಲ್ಲುತ್ತಾಳೆ. ಎಲ್ಲೋ ಅಬ್ಬರವಿಲ್ಲದ ಶಾಂತವಾದ ಅಭಿನಯದ ಮೂಲಕ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾಳೆ. ಅಸಲಿಗೆ ನಿಜವಾದ ರಾಣಿ ಪದ್ಮಾವತಿ ಹೀಗೆ ಇದ್ದಳೇನೋ ಎನ್ನುವಂತೆ ನಟಿಸಿದ್ದಾಳೆ. ಈಕೆಗೆ ಶಾಹೀದ್ ಕಪೂರ್ ಸಾಥ್ ನೀಡಿದ್ದಾನೆ. ರಾಜನ ಪಾತ್ರದಲ್ಲಿ ಶಾಹೀದ್ ನಟನೆ ಪೂರಕವಾಗಿದೆ. ಆರಂಭದಲ್ಲಿ ಮಂಕಾಗಿ ಕಂಡರೂ ಚಿತ್ರ ಮುಂದುವರೆಯುತ್ತಿದ್ದಂತೆ ಶಾಹೀದ್ ನಟನೆ




**ಚಿತ್ರ:** ಪದ್ಮಾವತ್
**ನಿರ್ದೇಶನ:** ಸಂಜಯ್ ಲೀಲಾ ಬನ್ಸಾಲಿ
**ತಾರಾಗಣ:** ದೀಪಿಕಾ ಪಡುಕೋಣೆ, ಶಾಹೀದ್ ಕಪೂರ್, ರಣ್‌ವೀರ್ ಸಿಂಗ್
**ಸಂಗೀತ:**ಸಂಜಯ್ ಲೀಲಾ ಭನ್ಸಾಲಿ
**ಹಿನ್ನಲೆ ಸಂಗೀತ:** ಸಂಚಿತ್ ಬಲ್ಹಾರಾ
**ಛಾಯಾಗ್ರಹಣ:**ಸುದೀಪ್ ಚಟರ್ಜಿ

ಇಮ್ಮಡಿಯಾಗುತ್ತಾ ಸಾಗುತ್ತದೆ.

ಇನ್ನು ರಣ್‌ವೀರ್ ಸಿಂಗ್ ನಟನೆ ಸಂಪೂರ್ಣ ಚಿತ್ರವನ್ನು ಆವರಿಸಿದೆ. ಒಂದೊಂದು ದೃಶ್ಯದಲ್ಲೂ ತಿಂದು ಹಾಕುವಂತೆ ನಟಿಸಿದ್ದಾನೆ. ಈತನ ನಟನೆ ನೋಡಿದ ಬಳಿಕ ಖಿಲ್ಜಿ ಹೆಸರು ಕೇಳಿದ ತಕ್ಷಣ ರಣ್‌ವೀರ್ ಮುಖ ನೆನಪಿಗೆ ಬರೋದ್ರಲ್ಲಿ ಸಂಶಯವಿಲ್ಲ, ಆ ಪರಿಗೆ ಈತನ ನಟನೆ ಕಾಡುತ್ತದೆ. ದುರಾಸೆಯ ಮೂರ್ತ ಸ್ವರೂಪದಂತಿರುವ ಖಿಲ್ಜಿಯ ಪಾತ್ರದಲ್ಲಿ ರಣ್‌ವೀರ್‌ನನ್ನು ನೋಡುವುದೇ ವಿಶೇಷ ಅನುಭವ. ಅದರಲ್ಲೂ ಚಿತ್ರದ ಅಂತಿಮ ರಣ್‌ವೀರ್ ನಟನೆ ಜಸ್ಟ್ ವಾವ್! ಈತನ ನಟನೆಯಲ್ಲೇ ಅರ್ಧ ಚಿತ್ರ ನಿಂತಿದೆ ಎಂದರೆ ತಪ್ಪಾಗಲಾರದು.

ಚಿತ್ರದ ಸಂಗೀತ ಹಾಗೂ ಹಿನ್ನಲೆ ಸಂಗೀತ ಸಿನಿಮಾವನ್ನು ಇನ್ನಷ್ಟು ಶ್ರೀಮಂತವಾಗಿಸಿದೆ. ಛಾಯಾಗ್ರಹಣ ಚಿತ್ರದ ಮತ್ತೊಂದು ದೊಡ್ಡ ಆಸ್ತಿ. ಪ್ರತಿಯೊಂದು ಫ್ರೇಮ್ ಸಹ ನೋಡುಗನನ್ನು ಮೂ ಕ ವಿ ಸ್ಮಿ ತ ನ ನ್ನಾ ಗಿ ಸು ತ್ತ ದೆ. ಬನ್ಸಾಲಿ ಸಂಗೀತದಲ್ಲಿ ಮೂಡಿಬಂದಿರುವ ಹಾಡುಗಳು ಚಿತ್ರದ ಮೂಡ್ ತಕ್ಕಂತೆ ಸುಂದರವಾಗಿ ತೆರೆಮೇಲೆ ಕಾಣಸಿಗುತ್ತದೆ.

ಚಿತ್ರ ಮೊದಲಾರ್ಧ ಅಲ್ಲಲ್ಲಿ ನೋಡುಗರ ತಾಳ್ಮೆ ಪರೀಕ್ಷಿಸುತ್ತದೆ. ಮೊದಲಾರ್ಧ ಇನ್ನಷ್ಟು ಚುರುಕಾಗಬೇಕಿತ್ತು. ಇದೊಂದು ವಿಚಾರ ಹೊರತುಪಡಿಸಿದರೆ, ಚಿತ್ರದಲ್ಲಿ ಮೈನಸ್ ಪಾಯಿಂಟ್‌ಗಳಿಲ್ಲ.

– ಕೌಶಿಕ್ ಕೆ.ಎಸ್.

**ವಿದ್ಯಾರ್ಥಿ ಸಂಪಾದಕರು**

ತೇಜಾಕ್ಷಿ.ಕೆ
ನಾಗೇಂದ್ರ .ಬಿ
ಚಂದ್ರು .ಆರ್.ಬಿ
ಅರುಣ್.ಕೆ.ಆರ್
ದೀಕ್ಷಿತಾ

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ,
ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ದಿಗಂತ ಮುದ್ರಣಾಲಯ, ಯೆಯ್ಯಾಡಿ, ಮಂಗಳೂರು ದ.ಕ.–575008